<u>ಸಾಕ್ಷಿಯನ್ನು ದಿನಾಂಕಃ 27.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಲ್.ಎಸ್. ವಕೀಲರಿಂದಃ</u>

ದಾವಾ ಸ್ವತ್ತಿನಲ್ಲಿ ನಮ್ಮ ತಂದೆಯ ಕಾಲದಿಂದಲೂ ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇವೆ. ಪ್ರತಿವಾದಿ ನಮ್ಮ ಜಮೀನಿನ ಪಕ್ಕದ ಜಮೀನಿನವರಾಗಿರುತ್ತಾರೆ. ಅವರು 2007 ನೇ ಇಸವಿಯಲ್ಲಿ ಅವರ ಜಮೀನನ್ನು ಖರೀದಿ ಮಾಡಿರುತ್ತಾರೆ. ಪ್ರತಿವಾದಿಯು ಅವರು ಖರೀದಿಸಿದ ಜಮೀನಿನಲ್ಲಿ ಮಾತ್ರ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆಂದರೆ ಸಾಕ್ಷಿಯು ಹಿಂದೆ ಅವರು ಖರೀದಿ ಮಾಡಿದ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡಿದ್ದು ನಂತರ ನಮಗೆ ಸೇರಿದ 13 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ದಿನಾಂಕಃ 10.04.2023 ರಂದು ನಮ್ಮ ಜಮೀನನ್ನು ಸರ್ವೆ ಮಾಡಿಸಿದಾಗ ಪ್ರತಿವಾದಿ ನಮ್ಮ ಜಮೀನಿನಲ್ಲಿ 13 ಗುಂಟೆ ಜಾಗವನ್ನು ಒತ್ತುವರಿ ಮಾಡಿರುವುದು ಗೊತ್ತಾಗಿರುತ್ತದೆ. ದಿನಾಂಕಃ 17.05.2023 ರಂದು ಪ್ರತಿವಾದಿಯು ಸಹ ತಮ್ಮ ಜಮೀನನ್ನು ಅಳತೆ ಮಾಡಿಸಿರುತ್ತಾರೆಂದರೆ ಸಾಕ್ಷಿಯು ಪ್ರತಿವಾದಿಯು ದಿನಾಂಕಃ 26.04.2023 ರಂದು ಅವರ ಜಮೀನನ್ನು ಅಳತೆ ಮಾಡಿಸಿರುತ್ತಾರೆಂದು ನುಡಿಯುತ್ತಾರೆ. ಆ ರೀತಿ ಅಳತೆ ಮಾಡಿಸುವ ಪೂರ್ವದಲ್ಲಿ ನಮಗೆ ನೋಟೀಸ್ ಅನ್ನು ನೀಡಿದ್ದು ಅದು ನನಗೆ ಜಾರಿಯಾಗಿರುತ್ತದೆಂದರೆ ಸರಿ. ಆ ರೀತಿ ಪ್ರತಿವಾದಿ ಅವರ ಜಮೀನನ್ನು ಅಳತೆ ಮಾಡಿಸುವಾಗ ನಾನು ಸಹ ಅಲ್ಲಿ ಇದ್ದಿರುತ್ತೇನೆಂದರೆ ಸರಿ. ಆ ಸಮಯದಲ್ಲಿ ನಾನು ಹೇಳಿಕೆಗೆ ಸಹಿಯನ್ನು ಸಹ ಮಾಡಿರುತ್ತೇನೆಂದರೆ ಸರಿ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಪ್ರತಿವಾದಿಯು ಮೇಲೆ ಹೇಳಿದಂತೆ ಅಳತೆ ಮಾಡಿಸುವಾಗ ಭೂ ಮಾಪಕರು ಅಳತೆ

ಕಾರ್ಯ ನಡೆಸುವಾಗ ಜರುಗಿಸಿದ ಮಹಜರ್ ನ ಆನ್ ಲೈನ್ ಪ್ರತಿ ಅಲ್ಲವೇ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ಒಪ್ಪಿಕೊಂಡು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಒಪ್ಪಿಕೊಳ್ಳುತ್ತಾರೆ. (ಈ ಹಂತದಲ್ಲಿ ವಾದಿ ಪರ ವಕೀಲರು ಅದು ಆನ್ ಲೈನ್ ಪ್ರತಿ ಆಗಿರುವುದಿಲ್ಲ ಬದಲಾಗಿ ಜೆರಾಕ್ಸ್ ಪ್ರತಿ ಆಗಿರುತ್ತದೆ ಎಂದು ತಕರಾರು ಸಲ್ಲಿಸಿರುತ್ತಾರೆ). ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಯನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಪ್ರತಿವಾದಿಯ ಪರ **ನಿ.ಡಿ.-1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಡಿ.-1(ಎ)** ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಿ ಪ್ರತಿವಾದಿಯು ಮೇಲೆ ಹೇಳಿದಂತೆ ಅಳತೆ ಮಾಡಿಸುವ ಪೂರ್ವದಲ್ಲಿ ಭೂ ಮಾಪಕರು ನನಗೆ ನೀಡಿದ ನೋಟೀಸ್ ಆನ್ ಲೈನ್ ಪ್ರತಿ ಅಲ್ಲವೇ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ಒಪ್ಪಿಕೊಂಡು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಒಪ್ಪಿಕೊಳ್ಳುತ್ತಾರೆ. (ಈ ಹಂತದಲ್ಲಿ ವಾದಿ ಪರ ವಕೀಲರು ಅದು ಆನ್ ಲೈನ್ ಪ್ರತಿ ಆಗಿರುವುದಿಲ್ಲ ಬದಲಾಗಿ ಜೆರಾಕ್ಸ್ ಪ್ರತಿ ಆಗಿರುತ್ತದೆ ಎಂದು ತಕರಾರು ಸಲ್ಲಿಸಿರುತ್ತಾರೆ). ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಯನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಪ್ರತಿವಾದಿಯ ಪರ **ನಿ.ಡಿ.-2** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಡಿ.-2(ಎ)** ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಗ್ರಾಮಸ್ಥರಾದ ದಾನಿ, ಆನಂದ, ನಾಗರಾಜು, ಲಿಂಗರಾಜೇಗೌಡ ಎಲ್ಲರೂ ಇದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ದಿನದಂದು ಭೂ ಮಾಪಕರು ಪ್ರತಿವಾದಿಯ ಜಮೀನನ್ನು ಅಳತೆ ಮಾಡಿ ಯಾವುದೇ ಒತ್ತುವರಿ ಇರುವುದಿಲ್ಲವೆಂದು ವರದಿ ನೀಡಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ

ಎಂದು ನುಡಿಯುತ್ತಾರೆ. ನಮ್ಮ ಜಮೀನಿನ ಸುತ್ತಲೂ ಬೇಲಿ ಹಾಕಿಸಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿ ಅವರ ಜಮೀನಿನಲ್ಲಿ ತೆಂಗಿನ ಗಿಡ ಮತ್ತು ಅಡಕೆ ಗಿಡಗಳನ್ನು ಹಾಕಿರುತ್ತಾರೆಂದರೆ ಸಾಕ್ಷಿಯು ಅವರೂ ಹಾಕಿರುತ್ತಾರೆ ಮತ್ತು ನಾವು ಸಹ ನಮ್ಮ ಜಮೀನಿನಲ್ಲಿ ತೆಂಗು ಹಾಗು ಅಡಕೆ ಹಾಕಿರುತ್ತೇವೆಂದು ನುಡಿಯುತ್ತಾರೆ. ಪ್ರತಿವಾದಿಯ ಜಮೀನಿನಲ್ಲಿರುವ ತೆಂಗಿನ ಗಿಡ ಮತ್ತು ಅಡಕೆ ಗಿಡಗಳಲ್ಲಿ ಈಗ ಫಸಲು ಬರುತ್ತಿದೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**